## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ನ್ಯಾಯಾಲಯ ಆಳಂದ

## ಸಿ.ಸಿ. ನಂ. 5503/2022

ಪಿರ್ಯಾದಿ ಕರ್ನಾಟಕ ಸರ್ಕಾರದ ಪರ
ಪಿ.ಎಸ್.ಐ ನರೋಣಾ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು
1. ಪ್ರವೀಣಕುಮಾರ ತಂದೆ ಶಿವಶರಣಪ್ಪ ಸುಜಾತ,
ವಯಃ 35ವರ್ಷ, ಉಃ ಕೂಲಿ ಕೆಲಸ,
ಸಾಃ ದೇಗಾಂವ ಗ್ರಾಮ, ತಾಃ ಆಳಂದ.
2. ವಿಜಯಕುಮಾರ ತಂದೆ ಸಿದ್ದಪ್ಪ ಭಾವಿಮನಿ,
ವಯಃ 35ವರ್ಷ, ಉಃ ಕೂಲಿ ಕೆಲಸ,
ಸಾಃ ಮಡಕಿ ಗ್ರಾಮ, ತಾಃ ಕಮಲಾಪೂರ.
3. ಆಶೋಕ ತಂದೆ ಸಿದ್ದಪ್ಪ ಭಾವಿಮನಿ,
ವಯಃ 33ವರ್ಷ, ಉಃ ಕೂಲಿ ಕೆಲಸ,
ಸಾಃ ಮಡಕಿ ಗ್ರಾಮ, ತಾಃ ಕಮಲಾಪೂರ.
3. ಮೋಹನ ತಂದೆ ಮಲ್ಲಿಕಾರ್ಜುನ ಹೊಳಕರ,
ವಯಃ 30ವರ್ಷ, ಉಃ ಚಾಲಕ,
ಸಾಃ ಕಾಳಮಂದರಗಿ ಗ್ರಾಮ, ತಾಃ ಕಮಲಾಪೂರ (SPLIT UP).

### ದಂಡ ಪ್ರಕ್ರೀಯಾ ಸಂಹಿತೆ ಕಲಂ 313 ರ ಅಡಿ ಆರೋಪಿಗಳ ಹೇಳಿಕೆ

ಪ್ರಶ್ನೆ 1 ನ್ಯಾಯಾಲಯದ ಮುಂದೆ ಅಭಯೋಜನೆ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ 1 ರಿಂದ 3ನೇ ಆರೋಪಿತರು. ಕೇಳಿರುತ್ತೇವೆ.

ಪ್ರಶ್ನೆ 2. ಸಿ.ಡಬ್ಲೂ. 6. ಪಿ.ಡಬ್ಲೂ. 3 ಅನ್ನಪೂರ್ಣ ಗಂಡ/ತಂದೆ ಬಸವರಾಜ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 5, 7 ರಿಂದ 11 ರವರ ಪರಿಚಯ ಇರುತ್ತದೆ. ಸಂಜೆ ಹೊತ್ತಿನಲ್ಲಿ ನನ್ನ ಮಗ ಹಾಗೂ ಆರೋಪಿತರು ಜಗಳವಾಡುತ್ತಿದ್ದರು. ನಾನು ಜಗಳ ಬಿಡಿಸಲು ಹೋದಾಗ ಬೈಯಲು ಪ್ರಾರಂಭಿಸಿದರು ಆದ ಕಾರಣ ಪ್ರಕರಣ ದಾಖಲಿಸಿದರು. ನನ್ನ ಮಗ ಬಿಡಿಸಲು ಹೋದಾಗ ಹೊಡೆದಿರುತ್ತಾರೆ. ಎಂದು ಸಾಕ್ಷಿ ನುಡಿದಿರುತ್ತಾರೆ, ನೀವೇನು ಹೇಳುತ್ತೀರಿ?

ಉತ್ತರಃ 1 ರಿಂದ 3ನೇ ಆರೋಪಿತರು. ಸುಳ್ಳು

ಪ್ರಶ್ನೇ 3- ಸಿ.ಡಬ್ಲೂ.12. ಪಿ. ಡಬ್ಲೂ. 7, ಮಲ್ಲಿನಾಥ ತಂದೆ ಚಂದ್ರಷಾ ಅವರು ತಮ್ಮ ನುಡಿ ಸಾಕ್ಷಿಯಲ್ಲಿ ನಾನು 27.09.2020 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ ಠಾಣೆಯಲ್ಲಿ ಪೋಲಿಸ

ಮುಖ್ಯ ಪೇದೆ ಆಗಿ ಕಾರ್ಯನಿರ್ವಹಿಸುತ್ತಿದ್ದೇನೆ. ದಿ.21.03.2022 ರಂದು ಠಾಣಾಧಿಕಾರಿಯಾಗಿದ್ದಾಗ ಚಾಸಾ-1 ಠಾಣೆಗೆ ಹಾಜರಾಗಿ ಸಂಜೆ 17.00 ಗಂಟೆಗೆ ಹಲ್ಲೆಯ ಹಿನ್ನಲೆಯಲ್ಲಿ ದೂರು ಸಲ್ಲಿಸಿದ್ದು ಅದರ ಸಾರಾಂಶದ ಮೇರೆಗೆ ನಾನು ಠಾಣಾ ಗುನ್ನೆ ನಂ.35/2022 ದಾಖಲಿಸಿಕೊಂಡು ತನಿಖೆ ಕೈಗೊಂಡೆನು ನಂತರ ಪಿಸಿ ವಿವೇಕರವರ ಮೂಖಾಂತರ ನ್ಯಾಯಾಲಯಕ್ಕೆ ಪ್ರ.ವ.ವ.ವನ್ನು ಸಲ್ಲಿಸಿರುತ್ತೇನೆ. ದಿ.22.03.2022 ರಂದು ಗುನ್ನೆ ಜಾಗವನ್ನು ಚಾಸಾ-1 ರವರು ತೋರಿಸಿದ್ದು, ಗುನ್ನೆ ಸ್ಥಳಕ್ಕೆ ಹೋಗಿ ಚಾಸಾ-2, 3 ರವರ ಸಮಕ್ಷಮ ಬೆಳಗ್ಗೆ 9.00 ರಿಂದ 10.00 ರ ವರೆಗೆ ಪಂಚನಾಮೆ ಮಾಡಿರುತ್ತೇನೆ. ಅದೇ ದಿನ ಚಾಸಾ-3 ರಿಂದ 11 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿ.20.07.2022 ರಂದು ಮಾನ್ಯ ನ್ಯಾಯಾಲಯಕ್ಕೆ ದೋ.ಪ. ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ನೀವೇನು ಹೇಳುತ್ತಿರಿ ?

ಉತ್ತರಃ 1 ರಿಂದ 3ನೇ ಆರೋಪಿತರು. ಸುಳ್ಳು

ಪ್ರಶ್ನೆ 3- ನೀವು ಏನನ್ನಾದರೂ ಹೇಳ ಬಯಸುವೀರಾ?
ಉತ್ತರಃ 1 ರಿಂದ 3ನೇ ಆರೋಪಿತರು. ಏನು ಇಲ್ಲ

ಪ್ರಶ್ನೆ 5- ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?
ಉತ್ತರಃ 1 ರಿಂದ 3ನೇ ಆರೋಪಿತರು. ಏನು ಇಲ್ಲ

(ಮೇಲೆ ಹೇಳಲಾದ ಪ್ರಶ್ನೆಗಳನ್ನು 1 ರಿಂದ 3ನೇ ಆರೋಪಿತರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವನು ತಿಳಿದುಕೊಂಡು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಳ್ಳಲಾಗಿದೆ ಎಂದು ಧೃಡೀಕರಿಸಲಾಗಿದೆ.)

ಸಿ.ಸಿ. ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ.